ನನಗೆ ಒಲಿದು ಬಂದುದೇ ಭಾಗ್ಯ. ನಾನಿಂದು ಈ ಜಾಗದಲ್ಲಿ ಇದ್ದರೆ, ಆ ಯಶಸ್ಸೆಲ್ಲ ನನ್ನ ಗುರುಗಳಿಗೆ ಸಲ್ಲಬೇಕು. ನನ್ನಿಂದ ಏನೇ ತಪ್ಪುಗಳಾದರೂ ಅದು ನನ್ನದೇ ಆಗಿರುತ್ತವೆ ಎಂದು ನಂಬಿದವಳು ನಾನು.

**◆ ಈ ನೃತ್ಯದಲ್ಲಿ ಅಡವುಗಳು, ಹೆಜ್ಜೆಗಾರಿಕೆ ಎಲ್ಲ ಯಾವ ಶೈಲಿಯಲ್ಲಿರುತ್ತವೆ? ಭರತನಾಟ್ಯ ಅಥವಾ ಕೂಚಿಪುಡಿ?**

ಇಲ್ಲ, ಇದು ಅವರೆಡೂ ಶೈಲಿಯಲ್ಲಿ ಇರುವುದಿಲ್ಲ. ಉದಾಹರಣೆಗೆ, 'ವಿನಾಯಕ ಕೌತ್ವಂ' ಪ್ರಸ್ತುತಪಡಿಸುವಾಗ ಅದಕ್ಕೆ ಪ್ರತ್ಯೇಕವಾದ ಎಪತ್ತೆರಡು ಅಕ್ಷರ ಕಾಲದ ತಾಳವೇ (ವಿನಾಯಕ ತಾಳ) ಇದೆ. ಹಿಂದೆಲ್ಲ ಒಬ್ಬರು ದೇವದಾಸಿ 'ವಿನಾಯಕ ಕೌತ್ವ' ಪ್ರದರ್ಶನ ನೀಡಿ ಮುಕ್ತಾಯ ಮಾಡುವ ವೇಳೆಗೆ ಹೆಜ್ಜೆಗಾರಿಕೆಯಲ್ಲಿಯೇ ದೇವರ ಚಿತ್ರವು ಮೂಡುವಷ್ಟು ಕಲಾನಿಪುಣರಾಗಿದ್ದರೆಂದು ನನಗೆ ಪಾಠ ಮಾಡಿದ ಹಿರಿಯ ದೇವದಾಸಿ ಮಹಿಳೆ ಹೇಳಿದ್ದರು. ಆದರೆ ನಂತರದ ದಿನಗಳಲ್ಲಿ ದೇವರ ಚಿತ್ರವನ್ನು ಕಾಲಿನಲ್ಲಿ ಬರೆಯಬಾರದು ಎಂಬ ಆಕ್ಷೇಪ ವ್ಯಕ್ತವಾಗಿ, ನೃತ್ಯದ ತಾಳವನ್ನು ಬದಲಾಯಿಸಿದ್ದರಂತೆ.

**◆ ಆಂಧ್ರಪ್ರದೇಶದಲ್ಲಿ ಈ ನೃತ್ಯವನ್ನು ಕಲಿತು ಬಂದ ಬಳಿಕ ನೀವು ಆ ಶೈಲಿಯ ನೃತ್ಯವನ್ನು ಪ್ರದರ್ಶಿಸಲು ಅವಕಾಶ ಸಿಕ್ಕಿತೇ? ಅಂದರೆ ಯಾವುದಾದರೂ ದೇವಸ್ಥಾನದಲ್ಲಿ ಅವಕಾಶ ದೊರೆಯಿತೇ?**

ನಾನು ಆಂಧ್ರಪ್ರದೇಶ ಸರ್ಕಾರ ಆಯೋಜಿಸಿದ ವರ್ಕ್‌ಶಾಪ್‌ನಲ್ಲಿ ದೇವಾಲಯ ನೃತ್ಯವನ್ನು ಕಲಿತ ಬಳಿಕ ಬೆಂಗಳೂರಿನಲ್ಲಿ ಮೊತ್ತ ಮೊದಲ ಬಾರಿಗೆ ಸಜ್ಜನ್ ರಾವ್ ಸರ್ಕಲ್‌ನಲ್ಲಿರುವ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ದೇವಾಲಯ ನೃತ್ಯವನ್ನು ಮಾಡಲು ವ್ಯವಸ್ಥೆ ಮಾಡಿದ್ದರು. ಆಗಿನ ಕಾಲದಲ್ಲಿ ಬಿ.ವಿ. ಕೆ. ಶಾಸ್ತ್ರಿ ಅವರು ಮುತುವರ್ಜಿಯಿಂದ ಈ ಕಾರ್ಯಕ್ರಮ ಆಯೋಜಿಸಿದ್ದರು. ಆರ್ಯವೈಶ್ಯ ಸಂಘದವರೊಡನೆ ಮಾತನಾಡಿ, ಟಿಕೆಟ್ ಶೋ ಆಯೋಜಿಸಿದರು. ವೇದ ಮಂತ್ರಗಳನ್ನು ಹೇಳಲು ಪುರೋಹಿತರನ್ನು ಆಹ್ವಾನಿಸಿದ್ದರು. ದೇವದಾಸಿಗೆ ದೇವಾಲಯದ ಮೊಕ್ತೇಸರರು ಅಥವಾ ಊರಿನ ಪಟೇಲರು ಫಲತಾಂಬೂಲವನ್ನು ಕೊಟ್ಟು ಆಹ್ವಾನಿಸಿದ ರೀತಿಯಲ್ಲಿಯೇ ನನ್ನನ್ನು ಆಹ್ವಾನಿಸಿದರು. ಪಂಚ ಕನ್ನಿಕೆ, ಪಂಚ ಸುಮಂಗಲಿಯರು, ಕೊಂಬು ಕಹಳೆ, ಛತ್ರ ಚಾಮರ, ಬಿರುದುಗಳೊಂದಿಗೆ ಮೆರವಣಿಗೆಯಲ್ಲಿ ನನ್ನನ್ನು ಆಹ್ವಾನಿಸಿದರು. ದೇವರಿಗೆ ಸೇವೆ ಸಲ್ಲಿಸಲು ಹೀಗೆ ಮೆರವಣಿಗೆಯಲ್ಲಿ ಬರುವಾಗ ಆಕೆ ಪರದೆಯಲ್ಲಿರಬೇಕು. ಹಾಗೆ ದೇವಾಲಯದ ಹೆಬ್ಬಾಗಿಲಿಗೆ ಬಂದ ಮೇಲೆ ಆರತಿ ಮಾಡಿ ಒಳಗೆ ಕರೆದುಕೊಳ್ಳುತ್ತಾರೆ. ಅಲ್ಲಿಂದ ನೃತ್ಯ ಶುರುವಾಗುತ್ತದೆ. ಆಯಾ ದಿಕ್ಕಿನ ದೇವತೆಗಳಿಗೆ ಸೂಚಿಸಿದ ರಾಗಗಳಿಗೆ ಅನ್ವಯವಾಗುವಂತೆ ನೃತ್ಯವನ್ನು ನಾನು ಪ್ರಸ್ತುತಡಿಸಿದ್ದು ನೆನಪಿದೆ. ಹಿಂದೆಲ್ಲ ದೇವದಾಸಿಯರು ಊರಿನವರಿಗೆ ಮುಖತೋರಿಸುತ್ತಿರಲಿಲ್ಲ. ಅಪ್ಪಿತಪ್ಪಿ ಊರಿನಲ್ಲಿ ಆಕೆ ಏನಾದರೂ ಕೆಲಸ ಕಾರ್ಯಗಳನ್ನು ಮಾಡುವಾಗ ಯಾರಿಗಾದರೂ ಮುಖ ಗೋಚರಿಸಿದರೆ, ಶುಭ ಶಕುನವೆಂದು ಲೆಕ್ಕ. ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಸೇವೆ ಸಲ್ಲಿಸಿದ ದಿನ ನನಗೆ ಚೆನ್ನಾಗಿ ನೆನಪಿದೆ. ಅದು ನನ್ನ ಬಾಳಿನ ಪುಣ್ಯದಿನ. ಅನಂತರ ಇನ್ನೂ ಅನೇಕ ಕಡೆಗಳಲ್ಲಿ ಈ ನೃತ್ಯವನ್ನು ಪ್ರದರ್ಶಿಸಿದ್ದೇನೆ. ನಾನು ಈ ನೃತ್ಯವನ್ನು ಕಲಿಯಲು ಪ್ರೋತ್ಸಾಹಿಸಿದ ಕಮಲಾದೇವಿ ಚಟ್ಟೋಪಾಧ್ಯಾಯ ಅವರು ನೋಡಲಿ ಎಂದೇ ಈ ನೃತ್ಯ ಪ್ರದರ್ಶನವನ್ನು ಆಯೋಜಿಸಲಾಗಿತ್ತು. ಹೊರನಾಡು ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ಕರಾವಳಿಯ ಅನೇಕ ದೇವಸ್ಥಾನಗಳಲ್ಲಿ ನೃತ್ಯ ಸೇವೆ ಸಲ್ಲಿಸಿರುವೆ. ಮಥುರಾ ದೇವಳದ ಗರ್ಭಗುಡಿಯಲ್ಲಿ ನೃತ್ಯ ಸೇವೆ ಮಾಡಿದ್ದು ಮರೆಯಲಸಾಧ್ಯ. ನಂಜನಗೂಡು ದೇವಸ್ಥಾನದೊಳಗೆ ದೇವರಿಗಾಗಿ ಪ್ರತ್ಯೇಕ ಸೇವೆ ಸಲ್ಲಿಸುವ ಅವಕಾಶ ಕೊಟ್ಟಿದ್ದರು. ಹೊರಗಿನಿಂದ ಭಕ್ತರೆಲ್ಲ ಜಮಾಯಿಸಿ ನಮಗೆ ನೃತ್ಯ ನೋಡಲು ಅವಕಾಶ ಕೊಡಿ ಎಂದು ಗಲಾಟೆ ಮಾಡಿದ್ದು ನೆನಪಿದೆ. ಎರಡನೇ ಭಾಗದ ಸೇವೆಯನ್ನು ಭಕ್ತರ ಸಮ್ಮುಖದಲ್ಲಿ ನೀಡಿದ್ದೆ. ಒಂದೊಂದು ಕಡೆ ಸಲ್ಲಿಸಿದ ನೃತ್ಯಸೇವೆಯು ಒಂದೊಂದು ರೀತಿಯ ಅನುಭವವನ್ನು ಕೊಟ್ಟಿದೆ.

**◆ ಈ ನೃತ್ಯಪ್ರಕಾರವನ್ನು ನಿಮ್ಮಿಂದ ಕಲಿತುಕೊಳ್ಳಲು ಬೇರೆ ಯಾರೂ ಮುಂದೆ ಬರಲಿಲ್ಲವೇ?**

ದೇವಾಲಯ ನೃತ್ಯವನ್ನು ಕಲಿಯುವ ಆಸಕ್ತಿಯಿಂದ